**ದಿನಾಂಕಃ 29-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಮುಂದುವರೆದ ಪಾಟೀ ಸವಾಲುಃ 1 ರಿಂದ 5 ನೆ ಪ್ರತಿವಾದಿ ಪರ ಶ್ರೀ. ಪಿ ಆರ್ ಕೆ ವಕೀಲರ ಪರವಾಗಿ ಸಿ ಡಿ ಪಿ ವಕೀಲರಿಂದಃ**

1. ನನ್ನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಮಾಹಿತಿ ಇರುವುದಿಲ್ಲ. ನಮ್ಮ ಊರಿನಲ್ಲಿ ಯಾವತ್ತು ಪಂಚಾಯಿತಿ ಆಗಿದೆ ಎಂದು ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂಃ 14 ರಿಂದ 17 ರಲ್ಲಿ ಏನು ಬರೆದಿದೆ ಎಂದು ಈಗ ನನಗೆ ಮಾಹಿತಿ ಇರುವುದಿಲ್ಲ . ಸರ್ವೆ ನಂಃ 2/1 ಕ್ಷೇತ್ರ 1 ಎಕರೆ 15 ಗುಂಟೆ , ಸರ್ವೆ ನಂಃ 2/5 ಕ್ಷೇತ್ರ 17 ಗುಂಟೆ , ಸರ್ವೆ ನಂಃ 80/3x-1 ಕ್ಷೇತ್ರ 3 ಎಕರೆ 28 ಗುಂಟೆ ಈ ಆಸ್ತಿಗಳು ನನ್ನ ದಾವಾದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈಗ ಹೇಳಿದ ಸರ್ವೆ ನಂಬರ ಗಳು ದಾವಾ ಎ ಶೆಡ್ಯೂಲ್ ನಲ್ಲಿ ಇಲ್ಲ ಎಂದರೆ ಸರಿ. ಆದರೂ ಸಹ ನನ್ನ ಪ್ರಮಾಣ ಪತ್ರದಲ್ಲಿ ಸದರಿ ಸರ್ವೆ ನಂಬರ್ ಗಳ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿ. ಸದರಿ ಮೂರು ಸರ್ವೆ ನಂಬರ್ ಗಳು ನನ್ನ ಆಸ್ತಿ ಎಂದು

ಹೇಳಿರುತ್ತಾರೆ. ಸದರಿ ಮೂರು ಸರ್ವೆ ನಂಬರ್ ಗಳು ದಾವಾ ಶೆಡ್ಯೂಲ್ ನಲ್ಲಿ ಸೇರಿಸದ ಕಾರಣ ಅವುಗಳಲ್ಲಿ ಯಾವುದೆ ಕ್ಲೈಮ್ ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಅವು ನನ್ನ ಸ್ವಂತ ಆಸ್ತಿಗಳು ಎಂದು ಹೇಳುತ್ತಾರೆ. ಸದರಿ ಆಸ್ತಿಗಳನ್ನು ದಾವೆದಲ್ಲಿ ಸೇರಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ 3 ಸರ್ವೆ ನಂಬರ್ ಗಳು ಹುಲಿಕಟ್ಟಿ ಗ್ರಾಮದ ಸರ್ವೆ ನಂಬರ್ ಗಳು ಆಗಿರುತ್ತವೆ.

2. ಈ ಸರ್ವೆ ನಂಬರ್ ಗಳ ಬಾಬ್ತು ನಾನು ಮತ್ತು ನನ್ನ ಅಣ್ಣ ಸಹಾಯಕ ಆಯುಕ್ತರ ಮುಂದೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ಆರ್ ಟಿ ಎಸ್ ಎ ಪಿ 61/2022-23 ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ವಿಚಾರಣೆ ನಡೆದು ದಿಃ 19-12-2023 ರಂದು ನಮ್ಮ ವಿರುದ್ಧ ಆದೇಶ ಆಗಿದೆ ಎಂದರೆ ಸರಿಯಲ್ಲ. ಆ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ಮುಂದೆ ಆರ್ ಟಿ ಎಸ್ ಆರ್ ಎ ಸಿ ಆರ್ 99/2023-24 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಪುನರ್ ವಿಚಾರಣಾ ಮೇಲ್ಮನವಿ ಸಹ ದಿಃ 15-11-2024 ರಂದು ವಜಾ ಗೊಂಡಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಃ 113/6 ಎ ಕ್ಷೇತ್ರ 16 ಗುಂಟೆ ಜಾಗವನ್ನು ನನ್ನ ತಂದೆಯವರೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 16 ಗುಂಟೆ ಜಮೀನು ಖರೀದಿಗೆ ಹಿಡಿದ ನಾಗಪ್ಪ ಕೆಂಚನಗೌಡ ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಾಗಪ್ಪ ಪೋತಿ ಆದ ನಂತರ ಅವರ ಮಕ್ಕಳು ವಾರ್ಸಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಖರೀದಿಗೆ ಹಿಡಿದಾಗಿನಿಂದಲೂ ನಾಗಪ್ಪ ಮತ್ತು ಅವರ ಮಕ್ಕಳೆ ಸದರಿ ಆಸ್ತಿಯನ್ನು ಸ್ವಾಧೀನ ಅನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಃ 113/6 ಎ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೂ ಮತ್ತು ನನ್ನ ಅಣ್ಣನಿಗೂ ಗೊತ್ತಿದ್ದರುಾ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅದೇ ರೀತಿ ಸರ್ವೆ ನಂಃ 114/4 ಬಿ ಕ್ಷೇತ್ರ 2 ಎಕರೆ 2 ಗುಂಟೆ ಪ್ರತಿವಾದಿ ನಂಃ1 ರವರ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರು 2010 ನೆ ಇಸ್ವಿಯಿಂದಲೆ ಪ್ರತ್ಯೇಕ ವಾಸವಾಗಿ ವಹಿವಾಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿ ಸದರಿ ಜಮೀನಿನಲ್ಲಿ ಏನು ಬೆಳೆ ಬೆಳೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಃ 114/4 ಬಿ ಆಸ್ತಿಯಲ್ಲಿ 1 ನೆ ಪ್ರತಿವಾದಿ ಬೋರ್ ವೆಲ್ ಹಾಕಿಸಿರುತ್ತಾರೆ ಎಂದರೆ ಸರಿ. ಸದರಿ ಬೋರ್ ವೆಲ್ ನಿಂದ 2010 ರಿಂದಲೂ 1 ನೆ ಪ್ರತಿವಾದಿ ಕಬ್ಬು ಭತ್ತ ಬೆಳೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸರ್ವೆ ನಂಃ 114/4 ಬಿ ಕ್ಷೇತ್ರ 2 ಎಕರೆ 2 ಗುಂಟೆ ಆಸ್ತಿಯಲ್ಲಿ ನನಗಾಗಲಿ , ನನ್ನ ಅಣ್ಣ ಹಾಗೂ ನನ್ನ ತಂದೆಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1949 ರಲ್ಲಿ ಆದ ವಿಭಾಗದ ಪ್ರಕಾರ ಸದರಿ ಆಸ್ತಿ 1 ನೆ ಪ್ರತಿವಾದಿಯವರ ತಂದೆಯ ಹಿಸ್ಸೆಗೆ

ಬಂದಿದೆ ಎಂದರೆ ಸರಿಯಲ್ಲ. 1949 ರಲ್ಲಿ ನಾನು ಹುಟ್ಟಿರುವುದಿಲ್ಲ ಎಂದರೆ ಸರಿ. 1949 ರಲ್ಲಿ ಆದ ಹಿಸ್ಸೆದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

4. 1949 ನೇ ಇಸ್ವಿಯಲ್ಲಿ 1ನೆ ಪ್ರತಿವಾದಿಯವರ ಅಜ್ಜ ಮತ್ತು ನನ್ನ ಅಜ್ಜ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರಿಗೂ ನಮಗೂ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ನನಗೆ ಉಜ್ಜಪ್ಪನ ಘರಾಣೇದ ಬಗ್ಗೆ ಆಗಲಿ ನನ್ನ ಅಜ್ಜನ ಘರಾಣೇದ ಬಗ್ಗೆ ಆಗಲಿ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಃ 114/4 ಬಿ ಕ್ಷೇತ್ರ 2 ಎಕರೆ 2 ಗುಂಟೆ ಆಸ್ತಿ ಯನ್ನು ಎತ್ತಿಹಾಕಬೇಕು ಎಂದು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸ್ ಬಗ್ಗೆ ಆಗಲಿ , ಪ್ರಮಾಣ ಪತ್ರದ ಬಗ್ಗೆ ಆಗಲಿ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.